ಮಾತನಾಡುತ್ತಿದ್ದಳು. ಅವಳು ತನ್ನ ಬಟ್ಟೆಯನ್ನು ಸಹ ಬದಲಿಸಿರಲಿಲ್ಲ. ನನಗೆ ಸಿಟ್ಟು ಬಂತು. ಈ ಮಕ್ಕಳು ಮೊದಲು ಮನೆಗೆ ತಡವಾಗಿ ಬರುತ್ತಾರೆ, ಬಂದ ಕೂಡಲೇ ಮೊಬೈಲಿನಲ್ಲಿ ಮೈಮರೆಯುತ್ತಾರೆ. ಇವರೆಲ್ಲಾ ಯಾವ ಹಾದಿ ಹಿಡಿಯುತ್ತಿದ್ದಾರೆ?

‘ನಿದ್ರೆ ಯಾಕೆ ಮಾಡ್ತಿಲ್ಲ? ನಾಳೆ ಸ್ಕೂಲ್ ಇಲ್ವ?’ ಕೇಳಿದೆ.

ಅವಳು ತಲೆಯೆತ್ತಿ ನನ್ನನ್ನು ನೋಡಿ ಸ್ಪಷ್ಟವಾಗಿ ಹೇಳಿದಳು, ‘ನಿದ್ರೆ ಬರ್ತಿಲ್ಲ...’

‘ಫೋನ್ ಮಾಡೋದನ್ನು ನಿಲ್ಲಿಸಿ ಮಲಗು. ನಿದ್ರೆ ತನ್ನಷ್ಟಕ್ಕೆ ತಾನೇ ಬರುತ್ತೆ’ ನಾನು ರೇಗಿದೆ.

ಅವಳು ನನ್ನ ಮಾತಿಗೆ ಲೇಶಮಾತ್ರವೂ ಗಮನವನ್ನು ಕೊಡಲಿಲ್ಲ. ಮೊಬೈಲಿನಲ್ಲಿ ಮಾತನಾಡುವುದನ್ನು ಮುಂದುವರೆಸಿದಳು.

‘ಜೊಹಾನಾ, ನೀನು ಮೊಬೈಲಿನಲ್ಲಿ ಮಾತನಾಡುವುದನ್ನು ನಿಲ್ಲಿಸದಿದ್ದರೆ, ನಾನದನ್ನು ಕಿತ್ತುಕೊಳ್ತೀನಿ.’

ನನ್ನ ಎಚ್ಚರಿಕೆ ಅವಳಿಗೆ ತಾಗಲಿಲ್ಲ. ಅವಳು ನನ್ನ ಆದೇಶವನ್ನು ಸಾರಾಸಗಟಾಗಿ ಉಲ್ಲಂಘಿಸಿದಳು. ನಾನು ಅವಳ ಕೈಯಿಂದ ಮೊಬೈಲನ್ನು ಕಸಿದುಕೊಳ್ಳಲು ಮುಂದೆ ಬಂದೆ. ಆಗಲೇ ಅವಳು ತನ್ನ ಗೆಳತಿಗೆ ಹೇಳಿದಳು, ‘ತಾರಾ, ನಾನು ನಿನ್ನ ಹತ್ರ ಆಮೇಲೆ ಮಾತಾಡ್ತೀನಿ.’

ನಂತರ ನನ್ನನ್ನು ಅಸಡ್ಡೆಯಿಂದ ನೋಡುತ್ತಾ ಆದೇಶದ ಧ್ವನಿಯಲ್ಲಿ ಹೇಳಿದಳು, ‘ನನ್ನ ಕೋಣೆಯಿಂದ ಹೊರ ಹೋಗಿ. ನಾನು ಒಬ್ಬರ ಹತ್ರ ಮಾತನಾಡುತ್ತಿರುವುದನ್ನು ನೀವು ನೋಡ್ತಿಲ್ವ...?’

‘ಓಹೋ, ಹೀಗೋ...?’ ನಾನು ಅವಳ ಕೈಯಿಂದ ಮೊಬೈಲ್ ಕಸಿದುಕೊಂಡೆ. ಅವಳು ಕೆಂಡಾಮಂಡಲವಾದಳು. ನನ್ನನ್ನು ನೋಡುತ್ತಾ ಗಟ್ಟಿಯಾಗಿ ಕಿರುಚಿದಳು, ‘ನನ್ನ ಮೊಬೈಲನ್ನು ನನಗೆ ವಾಪಸ್ ಕೊಡಿ. ಇದು ನನ್ನ ಪ್ರಾಪರ್ಟಿ. ನಿಮಗೆ ಒಬ್ಬರ ಪರ್ಸನಲ್ ವಸ್ತುಗಳನ್ನು ತೆಗೆದುಕೊಳ್ಳುವ ಅಧಿಕಾರವಿಲ್ಲ...’

‘ಮಕ್ಕಳು ಸುಲಭವಾಗಿ ಸಿಗುವ ಸವಲತ್ತುಗಳನ್ನು ತಪ್ಪಾಗಿ ಉಪಯೋಗಿಸಿದಾಗ, ಪೋಷಕರು ಅವರನ್ನು ಕಂಟ್ರೋಲ್ ಮಾಡಬೇಕಾಗುತ್ತೆ...’

‘ನಾನೇನೂ ಮಿಸ್ ಯೂಸ್ ಮಾಡ್ತಿಲ್ಲ... ಅಗತ್ಯದ ವಿಷಯ ಮಾತಾಡ್ತಿದ್ದೇನೆ.’

‘ಅದನ್ನು ನಾನು ನೋಡ್ತಿದ್ದೀನಿ... ಮೊಬೈಲಿನ ಬ್ಯಾಟರಿ ಖರ್ಚಾಗಿದೆ ಅಂತ ಮೊದಲು ನನಗೆ ಹೇಳಿದೆ. ಈಗ ಅದೆಲ್ಲಿಂದ ಇದ್ದಕ್ಕಿದ್ದಂತೆ ಮೊಬೈಲ್ ಚಾರ್ಜ್ ಆಯ್ತು?’

‘ಇದು ಆ ಮೊಬೈಲ್ ಅಲ್ಲ. ಬೇರೆ ಮೊಬೈಲ್. ಇಲ್ಲಿ ನನ್ನ ಕೋಣೆಯ ಗೂಡಿನಲ್ಲಿಡಲಾಗಿತ್ತು. ಆ ಮೊಬೈಲ್ ನೋಡಿ ಇಲ್ಲಿದೆ, ಡೆಡ್ ಆಗಿದೆ.’

ನಮ್ಮಿಬ್ಬರ ಚರ್ಚೆ ಕೇಳಿ ನೀನಾ ಎಚ್ಚರಗೊಂಡು ಜೊಹಾನಾಳ ಕೋಣೆಗೆ ಬಂದಿದ್ದಳು. ನಾನು ಹೊರಳಿ ನೋಡಿದೆ. ಏನೋ ಹೇಳಬೇಕೆಂದಿದ್ದೆ. ಆಗಲೇ ಜೊಹಾನಾ ಇದ್ದಕ್ಕಿದ್ದಂತೆ ಹೇಳಿದಳು, ‘ಮಮ್ಮಿ, ನನಗೆ ನಿದ್ರೆ ಬರ್ತಿರಲಿಲ್ಲ. ನನ್ನ ಸ್ನೇಹಿತೆ ತಾರಾಳೊಂದಿಗೆ ಮಾತನಾಡುತ್ತಿದ್ದೆ. ಅವಳಿಗೆ ನಾಳೆಯ ಹೋಮ್‌ವರ್ಕ್ ಮತ್ತು ಕ್ಲಾಸಸ್ ಬಗ್ಗೆ ಕೇಳ್ತಿದ್ದೆ; ಇವರು ನನ್ನ ಕೋಣೆಗೆ ಬಂದು ನನ್ನ ಕೈಯಿಂದ ಮೊಬೈಲ್ ಕಿತ್ತುಕೊಂಡರು. ಅಲ್ಲದೆ ತಮ್ಮ ಉಗುರುಗಳಿಂದ ನನ್ನ ಕೈಯನ್ನೂ ಗಿಬರಿದರು. ತಾರಾಳಿಗೂ ಅದೆಷ್ಟು ಬ್ಯಾಡ್ ಇಂಪ್ರೆಶನ್ ಆಗಿರಬೇಕು...’ ಹೀಗೆಂದು ಅವಳು ಕೈ ಕೈ ಹೊಸಕಿಕೊಳ್ಳುತ್ತಾ ರೋದಿಸಿದಳು.

ನನಗೆ ಅತ್ಯಾಶ್ಚರ್ಯವಾಯಿತು. ಜೊಹಾನಾ ಬೇರೆ ತೆರನಾಗಿ ವಿಷಯವನ್ನು ಮಂಡಿಸಿ ನನ್ನನ್ನು ಅಪರಾಧಿಯನ್ನಾಗಿ ಮಾಡಿದಳು. ನನ್ನನ್ನು ಕಟಕಟೆಯಲ್ಲಿ ನಿಲ್ಲಿಸಿದಳು. ನೀನಾ ಕೂಡಲೇ ಬಂದು ತನ್ನ ಮಗಳನ್ನು ತಬ್ಬಿಕೊಂಡಳು. ಜೊಹಾನಾ ತನ್ನ ತಾಯಿಯ ಸೊಂಟ ಬಳಸಿ, ಬಿಕ್ಕಳಿಸುತ್ತಾ ರೋದಿಸಿದಳು.

ನಾನು ಮಾತನಾಡುವುದಕ್ಕೆ ಮೊದಲು ನೀನಾ ಕೈಯೆತ್ತಿ ನನಗೆ ಗಡಸು ಶಬ್ದಗಳಲ್ಲಿ ಹೇಳಿದಳು, ‘ನೀವು ನಿಮ್ಮ ಕೋಣೆಗೆ ಹೋಗಿ, ನಾನು ಬರ್ತೀನಿ...’

ನಾನು ಮಾತನಾಡದೆ ಜೊಹಾನಾಳ ಕೋಣೆಯಿಂದ ಹೊರಟು ನನ್ನ ಕೋಣೆಗೆ ಹೋಗಿ, ಹಾಸಿಗೆಯ ಮೇಲೆ ಕೂತು ನೀನಾಳನ್ನು ನಿರೀಕ್ಷಿಸಲಾರಂಭಿಸಿದೆ. ನಾನು ಮೂಕನಾಗಿದ್ದೆ. ಅರ್ಧ ಗಂಟೆಯ ನಂತರ ನೀನಾ ಕೋಣೆಗೆ ಬಂದಾಗ ಕೇಳಿದೆ, ‘ಜೊಹಾನಾ ಹೇಗಿದ್ದಾಳೆ?’

‘ಈಗ ಸರಿಯಿದ್ದಾಳೆ’.

ನಾನು ನನ್ನ ನಿರ್ದೋಷಿತನವನ್ನು ಹೇಳಲು ಮುಂದಾದಾಗ ನೀನಾ ಹೇಳಿದಳು, ‘ಪಾಲ್, ತಪ್ಪು ಯಾರದ್ದೆಂದು ನನಗೆ ಗೊತ್ತಿಲ್ಲ. ಆದರೆ ನಿಮಗೂ ಜೊಹಾನಾಳಿಗೂ ಸರಿ ಹೊಂದುತ್ತಿಲ್ಲ ಎಂಬುದನ್ನು ನಾನು ನೋಡ್ತಿದ್ದೇನೆ.’

‘ನನಗೂ ಜೊಹಾನಾಳಿಗೂ ಹೊಂದಿಕೆಯಾಗ್ತಿಲ್ಲ! ನೀನು ನನ್ನ ಮೇಲೆ ಇದೆಂಥ ಆಪಾದನೆಯನ್ನು ಹೊರಿಸುತ್ತಿದ್ದೀಯ? ಆ ಹುಡುಗಿ ಸದಾ ಒರಟಾಗಿ ಮಾತನಾಡುತ್ತಾಳೆ. ಅವಳಿಗೆ ಒಂದು ಶಿಷ್ಟಾಚಾರವೇ ಇಲ್ಲ, ದೊಡ್ಡವರಿಗೆ ಗೌರವ ಕೊಡಬೇಕೆಂಬ ಭಾವನೆ ಸಹ ಇಲ್ಲ’.

‘ಪಾಲ್, ಒಂದು ವಿಷಯವನ್ನು ನೀವು ಗಮನವಿಟ್ಟು ಕೇಳಿ. ಒಂದು ವೇಳೆ ನಾನು, ನಿಮ್ಮಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸಂದರ್ಭ ಬಂದರೆ, ನಾನು ಜೊಹಾನಾಳನ್ನೇ ಆಯ್ಕೆ ಮಾಡಿಕೊಳ್ತೀನಿ. ನನಗೆ ನನ್ನ ಮಕ್ಕಳೇ ಮೊದಲು’.

‘ನನಗೆ ಕಾಣಿಸಿದ್ದು, ನಿನಗೇಕೆ ಕಾಣಿಸುತ್ತಿಲ್ಲ?’ ನಾನು ನೀನಾಳನ್ನು ತೀಕ್ಷ್ಣವಾಗಿ ಪ್ರಶ್ನಿಸಿದೆ. ‘ಕೆಲವು ದಿನಗಳಿಂದ ಜೊಹಾನಾಳ ವರ್ತನೆ ನನಗೆ ಸುತರಾಂ ಸರಿಯೆನಿಸುತ್ತಿಲ್ಲ. ಅವಳು ಇಂದು ಮನೆಗೆ ಅದೆಲ್ಲಿಂದ ಬಂದಿರುವಳೋ’.

‘ನನಗೆಲ್ಲಾ ಗೊತ್ತಿದೆ. ನಾನು ಅವಳ ತಾಯಿ, ಪಾಲ್! ಸ್ವಲ್ಪ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ. ಜೊಹಾನಾಳ ಬಾಲ್ಯ ಸಾಮಾನ್ಯ ಮಕ್ಕಳ ಬಾಲ್ಯದಂತೆ ಕಳೆಯಲಿಲ್ಲ. ನಾವು ಅವಳೊಂದಿಗೆ ಬೇರೆ ರೀತಿಯಲ್ಲಿ, ಪ್ರೀತಿಯಿಂದ ವರ್ತಿಸಬೇಕಾಗುತ್ತೆ’.

‘ಅವಳಿಗೆ ಪ್ರೀತಿ ಮಾತ್ರವಲ್ಲ, ಶಿಸ್ತು, ಜವಾಬ್ದಾರಿಯ ಅವಶ್ಯಕತೆ ಸಹ ಇದೆ. ಅವಳಿಗೆ ಕರ್ತವ್ಯಗಳ ಬಗ್ಗೆ ಅರಿವು ಮೂಡಿಸು. ಶಿಷ್ಟಾಚಾರವನ್ನು ಕಲಿಸು, ಅವಳಿಗೆ ಕೆಲವು ಜವಾಬ್ದಾರಿಗಳನ್ನು ವಹಿಸು. ಒಂದು ವೇಳೆ ಸಮಸ್ಯೆಗಳೇ ಇಲ್ಲದಿದ್ದರೆ ಮಕ್ಕಳು ಎಲ್ಲಿಂದ ಕಲಿಯುತ್ತಾರೆ?’

‘ನೀವು ಅಧ್ಯಾಪಕರು ಎಂಬುದನ್ನೇ ನಾನು ಮರೆಯುತ್ತೇನೆ. ನಿಮಗೆ ಉಪದೇಶ ಮಾಡುವ ಅಭ್ಯಾಸವಿದೆ’ ಅವಳು ಬಿರುಸಾಗಿ ಹೇಳಿದಳು.

ನಾನು ಮೌನವಹಿಸಿದೆ. ನಂತರ ನಾನು ನೀನಾಳ ಮಕ್ಕಳ ವಿಷಯದಲ್ಲಿ ನನ್ನ ಪ್ರವೇಶವನ್ನು ಕಡಿಮೆಗೊಳಿಸಿದೆ. ಆದರೆ ನೀನಾ ಜೊಹಾನಾಳಿಗೆ ಒಂದು ಪರ್ಸನಲ್ ಕಂಪ್ಯೂಟರ್ ಖರೀದಿಸುವಾಗ ನಾನು ನನ್ನ ಮೌನವನ್ನು ಮತ್ತೆ ಮುರಿದೆ. ಜೊಹಾನಾಗೆ ಇನ್ನೂ ಹದಿನಾಲ್ಕು ವರ್ಷ, ಇಷ್ಟು ಬೇಗ ಅವಳಿಗೆ ಪರ್ಸನಲ್ ಕಂಪ್ಯೂಟರ್ ಕೊಡಿಸಬೇಡ. ಹುಡುಗಿ ಅದಕ್ಕೆ ಅಡಿಕ್ಟ್ ಆಗ್ತಾಳೆ ಎಂದು ತುಂಬಾ ತಿಳಿಹೇಳಿದೆ. ಕಡೆಗೆ ಅದೇ ಆಯಿತು.

ಜೊಹಾನಾ ಕಂಪ್ಯೂಟರನ್ನು ಮಿತಿಮೀರಿ ಉಪಯೋಗಿಸುವುದನ್ನು ನೋಡಿದ ನಾನು ಅವಳ ಕಂಪ್ಯೂಟರಿನಲ್ಲಿ ಕೆ–9 ವೆಬ್ ಸುರಕ್ಷತೆಯನ್ನು ಹಾಕಿ ಇಂಟರ್ನೆಟ್‌ಗೆ ‘ಪೇರೆಂಟಲ್ ಕಂಟ್ರೋಲ್’ ಹಾಕಿದೆ. ಇದರಿಂದಾಗಿ ಹತ್ತು ಗಂಟೆಯ ನಂತರ ಅವಳ ಆನ್‌ಲೈನ್‌ನ ಚಟುವಟಿಕೆಗಳು ಸ್ಟಾಪ್ ಆದವು. ಅಪಾಯಕಾರಿ ಸೈಟ್‌ಗಳು ಬ್ಲಾಕ್ ಆದವು ಹಾಗೂ ಆನ್‌ಲೈನ್ ಪೋಕರಿತನದಿಂದ ಅವಳಿಗೆ ರಕ್ಷಣೆ ಲಭಿಸುವಂತೆ ಮಾಡಿದೆ.

‘ಈ ಇಂಟರ್ನೆಟ್ ಏಕೆ ಕೆಲಸ ಮಾಡ್ತಿಲ್ಲ?’ — ಅಂದು ಸಂಜೆ ಜೊಹಾನಾ ತನ್ನ ಲ್ಯಾಪ್‌ಟಾಪ್‌ನಲ್ಲಿ ಇಂಟರ್ನೆಟ್‌ಗೆ ಲಾಗ್ ಇನ್ ಆದಾಗ ಸ್ಕ್ರೀನ್‌ನಲ್ಲಿ ‘ನೋ ಸರ್ವೀಸ್’ ಎಂದು ಸೂಚನೆ ಬಂದಿದ್ದನ್ನು ನೋಡಿ ತುಂಬಾ ಕಳವಳಗೊಂಡಳು. ಅವಳು ಸಿಡಿಮಿಡಿಗೊಳ್ಳುತ್ತಾ ತನ್ನ ಲ್ಯಾಪ್‌ಟಾಪ್ ಹಿಡಿದು ನನ್ನ ಮತ್ತು ನೀನಾಳ ಕೋಣೆಗೆ ಬಂದಳು. ಅವಳು ನಾನು ಇಂಟರ್ನೆಟ್‌ನಲ್ಲಿ ಕೆಲಸ ಮಾಡುತ್ತಿರುವುದನ್ನು ನೋಡಿ ರೇಗಿದಳು, ‘ಅರೆ, ನೀವು ಇಂಟರ್ನೆಟ್‌ನಲ್ಲಿದ್ದೀರಿ, ಅಂದರೆ ಇಂಟರ್ನೆಟ್ ಕೆಲಸ ಮಾಡ್ತಿದೆ’ ಅವಳಿಗೆ ಆಶ್ಚರ್ಯವಾಗಿತ್ತು.

ನಾನು ಮುಗುಳ್ನಕ್ಕೆ, ಅವಳಿಗೆ ಇನ್ನಷ್ಟು ಆಶ್ಚರ್ಯವಾಯಿತು, ‘ಈ ಮನೇಲಿ ಏನಾಗ್ತಿದೆ, ಹೇಳಿ’ ಜೊಹಾನಾ ಕಿರುಚಿದಳು.

ನಾನು ಅವಳ ಕಂಪ್ಯೂಟರ್‌ನಲ್ಲಿ ‘ಪೇರೆಂಟಲ್ ಕಂಟ್ರೋಲ್’ ಹಾಕಿರುವ ಬಗ್ಗೆ ನೀನಾ ಹೇಳಿದಳು. ಅವಳು ಹುಚ್ಚಿಯಂತೆ ರೋದಿಸಿದಳು. ನೋವಿನಿಂದ ನರಳುವಂತೆ ವಿಲವಿಲ ಒದ್ದಾಡಿದಳು. ಆ ಹುಡುಗಿ ನನ್ನ ಬಗ್ಗೆ ಏನೇನೋ ಬೊಗಳಿದಳು. ನನ್ನನ್ನು ಕ್ರೂರವಾಗಿ ನೋಡುತ್ತಾ ಹೇಳಿದಳು.

‘ನೀವೇಕೆ ಇಷ್ಟು ಕಠೋರರಾಗಿದ್ದೀರಿ? ನೀವೊಬ್ಬರು ಶಾಲಾ ಶಿಕ್ಷಕರು; ಅಂದರೆ ನೀವು ಮನೆಯಲ್ಲೂ ನಿಮ್ಮ ಶಾಲೆಯ ಶಿಸ್ತನ್ನು ನಮ್ಮ ಮೇಲೆ ಹೇರಲು ನೋಡುವಿರಿ’.

ಅವಳು ಯಾವ ಧಾಟಿಯಲ್ಲಿ ‘ನಮ್ಮ’ ಎಂದಳೋ, ಅದನ್ನು ಕೇಳಿ ನನಗೆ ತುಂಬಾ